# ಮಸಾಲೆ ದೋಸೆ

## ಅ. ಪದಗಳ ಅರ್ಥ ಬರೆಯಿರಿ (Write word meaning)

ಹುಯ್ಯು = ಎರೆಯು, ಹೊಯ್ಯು; ಕರ್‍ರನೆ = ಕಪ್ಪಗೆ; ಪೂಸು = ಹಚ್ಚು; ಸೂಸು = ಬೀರು; ಪುಷ್ಟಿ = ಬಲಿಷ್ಠ; ಕಾಡು = ಪೀಡಿಸು; ಪಲ್ಯ = ಕಾಯಿಪಲ್ಲೆ, ಪರಿಮಳ = ಸುವಾಸನೆ; ದುಂಡನೆ = ವೃತ್ತಾಕಾರ; ಅರಗು = ಕರಗು

## ಆ. ಒಂದು ವಾಕ್ಯದಲ್ಲಿ ಬರೆಯಿರಿ (Answer in one sentence)

೧. ದೋಸೆ ಚುಂಯ್ ಚುಂಯ್ ಎಂದು ಯಾವುದರ ಮೇಲೆ ಸದ್ದು ಮಾಡುತ್ತದೆ?

ಉ: ದೋಸೆ ಚುಂಯ್ ಚುಂಯ್ ಎಂದು ಹೆಂಚಿನ ಮೇಲೆ ಸದ್ದು ಮಾಡುತ್ತದೆ.

೨. ಅಮ್ಮ ಯಾವ ದೋಸೆ ಹುಯ್ಯುವಳು?

ಉ: ಅಮ್ಮ ಹೂವಿನ ದೋಸೆ ಹುಯ್ಯುವಳು.

FOR KANNADA

೩. ಕರ್‍ರನೆಯ ಹೆಂಚಿನಲ್ಲಿ ಎಂತಹ ದೋಸೆ ಸಿದ್ಧವಾಗುತ್ತದೆ?

ಉ: ಕರ್‍ರನೆಯ ಹೆಂಚಿನಲ್ಲಿ ಬೆಳ್ಳಿಯ ದೋಸೆ ಸಿದ್ಧವಾಗುತ್ತದೆ.

೪. ದೋಸೆ ಕರಗದೆ ಕಾಡುವದು ಯಾವಾಗ?

ಉ: ದೋಸೆ ಕರಗದೆ ಕಾಡುವದು ಬಕಬಕ ತಿಂದಾಗ.

## ಇ. ಬಿಟ್ಟಸ್ಥಳ ತುಂಬಿರಿ. (Fill in the blanks)

೧. ಹಿಟ್ಟನು ಸೌಟಲಿ ಸರ್‍ರನೆ ಹೊಯ್ಯಲು.

೨. ಮೇಲೊಂದಿಷ್ಟು ಬೆಣ್ಣೆಯ ಪೂಸೆ.

೩. ಮೆಲ್ಲನೆ ಮೆಲ್ಲುವ ದುಂಡನೆ ದೋಸೆ.

೪. ಇಷ್ಟ ತೀರದ ಪುಷ್ಟಿಯ ದೋಸೆ.

**ಈ. ಸ್ವಂತ ವಾಕ್ಯದಲ್ಲಿ ಬರೆಯಿರಿ. (Make your own sentence)**

ಪರಿಮಳ : ತುಪ್ಪದ ಪರಿಮಳ ಚೆನ್ನಾಗಿದೆ.

ಅಚ್ಚುಮೆಚ್ಚು: ನನಗೆ ದೋಸೆ ಅಚ್ಚುಮೆಚ್ಚು.

**ಉ. ನಕಾರಾತ್ಮಕ ರೂಪ ಬರೆಯಿರಿ (Write the negative form)**

ಕುಣಿಯಿತು = ಕುಣಿಯಲಿಲ್ಲ

ಸೂಸಿತು = ಸೂಸಲಿಲ್ಲ

ತಿಂದರು = ತಿನ್ನಲಿಲ್ಲ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ